ಪ್ರಕಟಣೆ

ಅಧ್ಯಕ್ಷರು.—ಈಗ ಬಂದು ಪ್ರಕಟಣೆ ಮಾಡುತ್ತಿದ್ದೇನೆ. ತಾಳಿ, ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಇಂದು ಮಧ್ಯಾಹ್ನ ಸಭೆಸೇರಿ ಕೆಳಕಂಡಂತೆ ತೀರ್ಮಾನವನ್ನು ಕೈಗೊಂಡಿತು.—

ಮಂಗಳವಾರ ೧೮–೮–೧೯೮೭	ಅ) ಬರಗಾಲದ ಬಗ್ಗೆ ವಿಶೇಷ ಚರ್ಚೆ ಮುಂದುವರಿಯುವುದು.
	ಆ) ರಾಜ್ಯದಲ್ಲಿ ಬಟ್ಟೆ ಗಿರಣಿಗಳನ್ನು ಮುಚ್ಚಿರುವ ಪ್ರಯುಕ್ತ ಕಾರ್ಮಿಕರು ಹಾಗೂ ಕೈಗಾರಿಕೆಗಳು ಅನುಭವಿಸುತ್ತಿರುವ ತೊಂದರೆ ಬಗ್ಗೆ ವಿಶೇಷ ಚರ್ಚೆ
	ಇ) ಗವರ್ನರ ಸೆಳೆಯುವ ಸೂಚನೆಗಳು ಹಾಗೂ ಷಿಷಿಳನೇ ನಿಯಮಾವಳಿಯಲ್ಲಿ ನೀಡಲಾಗುವ ಸೂಚನೆಗಳನ್ನು ತೆಗೆದುಕೊಳ್ಳಲಾಗುವುದಿಲ್ಲ.
ಬುಧವಾರ ೧೯–೮–೧೯೮೭ ಹಾಗೂ ಗುರುವಾರ ೨೦–೮–೧೯೮೭	ಶಾಸನ ರಚನೆ ಕಾರ್ಯಕಲಾಪಗಳು
ಶುಕ್ರವಾರ ೨೧–೮–೧೯೮೭	ಶಾಸನ ರಚನೆ ಹಾಗೂ ಖಾಸಗಿ ಕಾರ್ಯಕಲಾಪಗಳು
೨೪–೮–೧೯೮೭ ಸೋಮವಾರ	ಅ) ಪೂರಕ ಅಂದಾಜುಗಳ ಬೇಡಿಕೆಯ ಮೇಲಿನ ಚರ್ಚೆ, ಧನವಿನಿಯೋಗ ವಿಧೇಯಕದ ಮಂಡನೆ ಮತ್ತು ಅಂಗೀಕಾರ
	ಆ) ಶಾಸನ ರಚನೆ ಕಾರ್ಯಕಲಾಪಗಳು
ಮಂಗಳವಾರ ೨೫–೮–೧೯೮೭ರಿಂದ ಗುರುವಾರ ೧೦–೯–೧೯೮೭	ಶಾಸನ ರಚನೆ ಕಾರ್ಯಕಲಾಪಗಳು
ಶುಕ್ರವಾರ ೧೧–೯–೧೯೮೭	ಶಾಸನ ರಚನೆ ಹಾಗೂ ಖಾಸಗಿ ಕಾರ್ಯಕಲಾಪಗಳು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರಷೀದ್ ಕೊಲೆ ಪ್ರಕರಣದ ವಿಷಯದಲ್ಲಿ ಮುಖ್ಯಮಂತ್ರಿಗಳಿಂದ ಸ್ಟೇಟ್‌ಮೆಂಟ್ ಮಾಡಿಸುತ್ತೇವೆ ಎಂದು ಹೇಳಿದ್ದರು. ಇದು ಬಹಳ ಮುಖ್ಯವಿಷಯವೆಂದು ತಾವು ಕೂಡ ಒಪ್ಪಿಕೊಂಡಿದ್ದೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈ ವಿಚಾರವನ್ನು ಮುಖ್ಯಮಂತ್ರಿಯವರಿಗೆ ತಿಳಿಸಿದ್ದೇನೆ.

ಅಧ್ಯಕ್ಷರು.—ಈಗ ಕೃಷ್ಣಾ ಅವರು ಮಾತನಾಡಲಿ

(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ...

ಅಧ್ಯಕ್ಷರು.—ತಮಗೆ ಸಮಾಧಾನ, ಶಾಂತಿ ಕಡಿಮೆ ಏನು ?